# ಸಾವಿನ ಬೆನ್ನತ್ತಿ ಬಂದ ಸೌಗಂಧಿಕಾ ಪರಿಮಳ

ಫೋನ್ ರಿಸೀವ್ ಮಾಡಿಕೊಂಡ ಸಿಂಧು ಮೆನನ್ 'ಓಹೋ, ಫೈನ್. ಖಂಡಿತ ಎಲ್ಲಾ ಕಾರ್ಯಗಳನ್ನು ಮುಗಿಸಿಕೊಂಡು, ಇನ್ ಅನದರ್ ಟ್ವೆಂಟಿ ಡೇಸ್ ಡೆಫಿನೆಟ್ಲಿ ಐ ವಿಲ್ ಬಿ ಇನ್ ಡೆಲ್ಲಿ...' ಎಂದವಳು ನನ್ನ ಕಡೆ ನೋಡಿ

'ಆಮ್ರಪಾಲಿ ಲೈನಿನಲ್ಲಿ, ಮಾತನಾಡ್ತೀರಾ' ಎಂದು ಉತ್ತರಕ್ಕೂ ಕಾಯದೆ ಫೋನ್ ನನ್ನ ಕೈಗೆ ಕೊಟ್ಟಿದ್ದಳು. ನಾನು 'ಹಲೋ...' ಎಂದಿದ್ದೆ. 'ಜರ್ನಿ ಚೆನ್ನಾಗಿತ್ತು ಅನ್ನಿಸ್ತದೆ. ಅನ್ನಿಸೋದೇನು, ಸಿಂಧು ಪಕ್ಕದಲ್ಲಿದ್ದರೆ ಅದು ಚನ್ನಾಗಿ ಇರಲೇಬೇಕು. ನಿನ್ನೆ ನೀವು ಇಲ್ಲಿಗೆ ಬಂದದ್ದು ಒಳ್ಳೆಯದೇ ಆಯಿತು. ಇಲ್ಲದಿದ್ದಲ್ಲಿ ಅವಳ ಜೊತೆ ಎರ್ನಾಕುಲಂಗೆ ನಾನು ಹೋಗಬೇಕಿತ್ತು. ತುಂಬಾ ಕಷ್ಟದ ಪರಿಸ್ಥಿತಿ ಎದುರಾಗಿಬಿಡುತ್ತಿತ್ತು. ಯಾರಿಗಾದರೂ ಜನ್ಮ ಕೊಟ್ಟವರನ್ನು ಕಳೆದುಕೊಂಡಾಗಿನ ಪರಿಸ್ಥಿತಿಯನ್ನು ಎದುರಿಸುವುದು ಕಷ್ಟವೇ ಸರಿ. ಸಿಂಧು ತಂದೆಯ ದೇಹವನ್ನು ಕಂಡು ತುಂಬಾ ಎಮೋಶನಲ್ ಆಗಬಹುದು ಅಥವಾ ಆಗದೇನೂ ಇರಬಹುದು. ಪರಿಸ್ಥಿತಿಯನ್ನು ನೀವು ನಿಭಾಯಿಸುತ್ತೀರಿ. ಆಂ, ನಿಮ್ಮ ಬ್ರದರ್ ವಿಕ್ರಂರೆಡ್ಡಿಯವರಿಗೆ ಹಾರ್ಟ್ ಅಟ್ಯಾಕ್ ಆಯಿತಂತೆ. ದಿಲ್ಲಿಯ ನಮ್ಮ ಹಾಸ್ಪಿಟಲ್‌ನಲ್ಲೇ ಪೋಸ್ಟ್ ಮಾರ್ಟಂ ಮಾಡ್ತಾರಂತೆ. ಅರ್ಧ ಗಂಟೆಯ ಹಿಂದೆ ಮೆಸೇಜ್ ಬಂತು. ಮೋಸ್ಟ್ ಪ್ರಾಬಬಲಿ ನಿಮಗೆ ಹೆಣ ಸಿಗುವುದು ನಾಳೆಯೇ ಎಂದು ಕಾಣುತ್ತದೆ. ನಿಮ್ಮ ಅಣ್ಣನ ವಿಷಯ ಸಿಂಧುಗೆ ಗೊತ್ತಿದೆಯೋ ಇಲ್ಲವೋ. ಅಲ್ಲಿ ಶವ ಸಂಸ್ಕಾರ ಪೂರ್ತಿಯಾದ ಮೇಲೆ ನೀವು ನಿಮ್ಮ ಮುಂದಿನ ದಾರಿ ತುಳಿಯಬಹುದು. ಅಂದಹಾಗೆ, ಪೂನಂ ಇಂದು ಬೆಳಿಗ್ಗೆಯೇ ಎಚ್ಚರಗೊಂಡಾಗ ಸಿಂಧುಳನ್ನು ಬಹಳವಾಗಿ ನೆನಪಿಸಿಕೊಂಡಳು...' ಎನ್ನುವುದರೊಂದಿಗೆ ಆಮ್ರಪಾಲಿ ಮಾತು ಮುಗಿಸಿದ್ದರು. ನಾನು ಫೋನನ್ನು ಸಿಂಧು ಮೆನನ್ ಕೈಗೆ ಕೊಡುವುದಕ್ಕೂ ಕಾರು 'ದಿ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್' ಪ್ರವೇಶಿಸುವುದಕ್ಕೂ ಒಂದೇ ಆಗಿತ್ತು.

'ದಿ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್' ಆವರಣದಲ್ಲಿ ಜನ ತುಂಬಿಹೋಗಿದ್ದರು. ಮೂರು ಪೊಲೀಸ್ ವಾಹನಗಳು ಕಟ್ಟಡ ಪ್ರವೇಶ ದ್ವಾರದ ಪಕ್ಕದಲ್ಲೇ ನಿಂತಿದ್ದವು. ಆಶ್ರಮದ ವಾಸಿಗಳ ಮತ್ತು ಸಾರ್ವಜನಿಕರ ದರ್ಶನಕ್ಕೆ ಅವಕಾಶವನ್ನು ಕಲ್ಪಿಸಲಾಗಿತ್ತು. ಕಾರನ್ನು ಇಳಿದ ಸಿಂಧು ಮೆನನ್ ಹೆಣ ಇಟ್ಟಿದ್ದ ಜಾಗದ ಪಕ್ಕದಲ್ಲಿ ಆಸನವೊಂದರ ಮೇಲೆ ಏನೋ ಯೋಚಿಸುತ್ತಾ ಕುಳಿತಿದ್ದ ಕೆ.ಎಮ್. ನಯ್ಯಾರ್ ಬಳಿ ಹೋಗಿ ಪಕ್ಕದ ಆಸನದಲ್ಲಿ ಕುಳಿತಿದ್ದಳು. ಸಕಲ ಸರ್ಕಾರಿ ಮರ್ಯಾದೆಗಳೊಂದಿಗೆ ಶವಸಂಸ್ಕಾರ ಮಾಡಲು ಸರ್ಕಾರ ತೀರ್ಮಾನಿಸಿದೆಯೆಂದೂ, ಮುಖ್ಯಮಂತ್ರಿಗಳು ದೆಹಲಿಯಲ್ಲಿ ಸಂಜೆಯ ಯಾವುದೋ ಮೀಟಿಂಗ್ ಅಟೆಂಡ್ ಮಾಡಬೇಕಾಗಿರುವುದರಿಂದ ಮಧ್ಯಾಹ್ನ ಒಂದು ಗಂಟೆಯೊಳಗೆ ಎಲ್ಲಾ ವಿಧಿವಿಧಾನಗಳನ್ನು ಮುಗಿಸಬೇಕಾಗಿದೆಯೆಂದು ಭಗವಾನ್ ಕುಟ್ಟಿ ಹತ್ತಿರ ಬಂದು ಕಿವಿಯಲ್ಲಿ ಉಸುರಿದ್ದ.

ಸಿಂಧು ಮೆನನ್ನಳ ತಲೆ ನೇವರಿಸುತ್ತಾ ನನ್ನ ಕಡೆ ನೋಡಿದ ಕೆ.ಎಮ್. ನಯ್ಯಾರ್ ನಗುತ್ತಾ ಕಣ್ಣಿನಲ್ಲೇ ಬಳಿಗೆ ಕರೆದಿದ್ದರು. ನಾನು ಮಾಯೆಗೊಳಗಾದವನಂತೆ ಹೋಗಿ ಕೆ.ಎಮ್. ನಯ್ಯಾರರ ಇನ್ನೊಂದು ಪಕ್ಕದ ಆಸನದಲ್ಲಿ ಕುಳಿತಿದ್ದೆ. 'ನೋಡಿ, ಸಾಲು ಸಾಲು ದುರಂತಗಳ ನೋವನ್ನು ಭರಿಸುವುದಾದರೂ ಹೇಗೆ? ಆದರೆ ವಿಧಿ ನಿಯಮಗಳೇ ಹಾಗಿದ್ದರೆ ನಾವು ಮಾಡುವುದಾದರೂ ಏನಿದೆ? ಹಾಗಾಗಿ ವರ್ತಮಾನವನ್ನು ಬಂದಂತೆ ಸ್ವೀಕರಿಸದೆ ಬೇರೆ ದಾರಿಯೇ ಇಲ್ಲ. ಸಿಂಧೂಗೂ ಇದರ ಮನವರಿಕೆಯನ್ನು ಬಹಳ ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದೀನಿ. ಆದರೆ ಕರುಳು ಮತ್ತು ರಕ್ತ ಇವೆಯಲ್ಲ; ಇವಕ್ಕೆ ಅದೆಂಥ ಬಲಾಢ್ಯವಾದ ಶಕ್ತಿ, ಸೆಳೆತಗಳಿವೆಯೋ ಗೊತ್ತಿಲ್ಲ, ಯಾವುದೋ ರೂಪದಲ್ಲಿ ಗೋಚರ ಮತ್ತು ಅಗೋಚರವಾಗಿ ಕಾಡುತ್ತಿರುತ್ತವೆ. ನಿಮ್ಮ ಅಣ್ಣ ವಿಕ್ರಮ್ ರೆಡ್ಡಿಯವರೂ ಹೃದಯಾಘಾತದಿಂದ ಸತ್ತು ಹೋದದ್ದಾಗಿ ಬೆಳಿಗ್ಗೆ ಏಳು ಗಂಟೆಗೇ ರಾಘವರೆಡ್ಡಿ ಫೋನ್ ಮಾಡಿದ್ದರು...' ಅಷ್ಟರಲ್ಲಿ ಸುಮಾರು ಅರವತ್ತು ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಬಂದು ನಯ್ಯಾರ್ ಮುಂದೆ ಕೈಜೋಡಿಸಿ ನಿಂತು 'ಸುಧೀಂದ್ರ ನಯ್ಯಾರ್ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದು ನಾನು ಕನಸು ಮನಸಿನಲ್ಲೂ ಎಣಿಸಿರಲಿಲ್ಲ ಕಾರ್ಲ್ ಮಾರ್ಕ್ಸ್. ಪ್ರತಿಯೊಬ್ಬ ವ್ಯಕ್ತಿಯೂ ತಾನು ಮಾಡಿದ ಎಲ್ಲಾ ಪುಣ್ಯ ಮತ್ತು ಪಾಪ ಕರ್ಮಗಳಿಗೆ ತಾನೇ ಹೊಣೆಯಾಗಿ ಅವುಗಳನ್ನು ಬಡ್ಡಿ ಸಮೇತ ತೀರಿಸಬೇಕಾಗಿರುವುದು ಸಾರ್ವಕಾಲಿಕ ಸತ್ಯವೆಂದು ಮಾತ್ರ ಸಾಬೀತಾಗುತ್ತಲೇ ಇರುತ್ತದೆ. ಸುಧೀಂದ್ರ ನಯ್ಯಾರರಿಗೆ ಏಸುವಿನ ಕೃಪೆ ಇದ್ದೇ ಇರುತ್ತದೆ...' – ತುಂಬಾ ವಿನಯದಿಂದ ಮಾತನಾಡಿ ಸುಧೀಂದ್ರ ನಯ್ಯಾರರ ಹೆಣ ಇಟ್ಟಿದ್ದ ಬಾಕ್ಸ್ ಹತ್ತಿರ ಹೋಗಿ ಪಾದಗಳ ಕಡೆ ತಲೆಯನ್ನಿಟ್ಟು ನಮಸ್ಕರಿಸಿ, 'ಸುಧೀಂದ್ರ ನಯ್ಯಾರ್ ಸ್ವರ್ಗ ಎಂಬುದು ಏನಾದರೂ ಇದ್ದರೆ ನೀವು ಸೀದಾ ಅಲ್ಲಿಗೆ ಹೋಗಿ ತಲುಪಿ. ಬೇಕಾದರೆ ದಯಾಮಯನಾದ ದೇವರಿಗೆ ನಾನೂ ಒಂದು ಸ್ಟ್ರಾಂಗ್ ರೆಕ್ಮೆಂಡ್ ಮಾಡ್ತೀನಿ...' ಎಂದವನ ಕಣ್ಣುಗಳಲ್ಲಿ ಬುಳುಬುಳು ನೀರು ಧುಮುಕಿದ್ದವು.

ಆ ವ್ಯಕ್ತಿಯನ್ನು ಕೆ.ಎಮ್. ನಯ್ಯಾರ್ ಮತ್ತು ಸಿಂಧು ಮೆನನ್ ಅಚ್ಚರಿ ಮತ್ತು ಕುತೂಹಲಗಳನ್ನು ತುಂಬಿಕೊಂಡು ನೋಡುತ್ತಿದ್ದರು. ಅಷ್ಟರಲ್ಲಿ ಅಲ್ಲಿಗೆ ಬಂದ ಕಾರ್ತಿಕೇಯನ್ ಮಾಪಿಳ್ಳೈ – 'ಅಬ್ಬಬ್ಬಾ... ಅಯ್ಯಾ ನಯ್ಯಾರ್, ನೋಡಿದೆಯಾ ಈ ಜೊಮನ್ ಮುತೆನ್ ಪುರಕಲ್‌ನ ನಾಟಕ. ನಮ್ಮ ಸುಧೀಂದ್ರ ನಯ್ಯಾರ್ ಒಳಗೊಳಗೇ ಬೆಂದು ಹೋಗಲಿಕ್ಕೆ ಇವನೂ ಅರ್ಧ ಕಾರಣ. ಮನುಷ್ಯ ತಪ್ಪು ಮಾಡುವುದು ಸಹಜ. ಜಗತ್ತಿನಲ್ಲಿ ಹುಟ್ಟಿದ ಯಾವ ವ್ಯಕ್ತಿ ಒಂದು ಸಣ್ಣ ತಪ್ಪೂ ಮಾಡದೆ ಸತ್ತುಹೋಗಿದ್ದಾನೆ ಹೇಳು. ಅದರಲ್ಲೂ ಹರೆಯದಲ್ಲಿ ಗಂಡಿಗಾಗಲೀ ಹೆಣ್ಣಿಗಾಗಲೀ ತಪ್ಪು ಮಾಡುವ ಮನಸ್ಸು ಮತ್ತು ಶಕ್ತಿ ಜಾಸ್ತಿಯಿರುತ್ತದೆ. ಇಷ್ಟಕ್ಕೂ ಬ್ರಹ್ಮಾಂಡದ ಹುಟ್ಟು ಮತ್ತು ಚಹರೆಗಳನ್ನು ಗಮನಿಸಿದಾಗ ಯಾವುದು ತಪ್ಪು, ಯಾವುದು ಸರಿ ಎಂಬುದನ್ನು ಕೂಡ ಸ್ಪಷ್ಟವಾಗಿ ಗುರುತಿಸಲು ಮನುಷ್ಯನಿಗೆ ಇದುವರೆಗೂ ಸಾಧ್ಯವಾಗಿಲ್ಲ. ಈ ಪುರುಕಲ್ ನಿರಂತರವಾಗಿ ತಿಂಗಳಿಗೊಮ್ಮೆಯಾದರೂ ಕೊಟ್ಟಾಯಂನ ಅಭಯ ಮರ್ಡರ್ ಕೇಸ್ ಬಗ್ಗೆ ಪತ್ರಿಕೆ ಮತ್ತು ಟೀವಿಗಳಲ್ಲಿ ಸುದ್ದಿ ಮಾಡುತ್ತಾ ಅದರೊಂದಿಗೆ ಸುಧೀಂದ್ರ ನಯ್ಯಾರರನ್ನು ಪ್ರಸ್ತಾಪ ಮಾಡುತ್ತಾ ಇನ್ನಿಲ್ಲದೆ ಕಿರುಕುಳ ನೀಡುತ್ತಾ ಬಂದ ಸಂಗತಿ ನಿನಗೆ ತಿಳಿಯದ್ದೇನೂ ಅಲ್ಲ. ಸುಪ್ರೀಂ ಕೋರ್ಟ್ ಕೊಟ್ಟೂರ್, ಪುತ್ರಿಕಯಲ್ ಮತ್ತು ಸೆಪಿಯರನ್ನು ಅಪರಾಧಿಗಳಾಗಿ ತೀರ್ಮಾನಿಸಿ ತೀರ್ಪು ಕೊಟ್ಟ ದಿನ ಈ ಪುರುಕಲ್ ಕೊಟ್ಟಾಯಂನಲ್ಲಿಯೇ ಅಲ್ಲದೆ ಎರ್ನಾಕುಲಂನಲ್ಲಿಯೂ ಮೆರವಣಿಗೆ ಆಯೋಜಿಸಿದ್ದ. ಇವೊತ್ತು ನೋಡು ಮಳ್ಳಿಯಂತೆ ಕಣ್ಣಲ್ಲಿ ನೀರು ಹಾಕ್ತಾ ಇದಾನೆ. ಹತ್ತು ವರ್ಷಗಳ ಹಿಂದೇನೆ ಸುಧೀಂದ್ರ ನಯ್ಯಾರ್ ಕೊಟ್ಟೂರ್‌ಗೆ ಸಪೋರ್ಟ್ ಮಾಡಿದ್ದಕ್ಕಾಗಿ ಸಾರ್ವಜನಿಕವಾಗಿ ಕ್ಷಮೆ ಯಾಚಿಸಿ ಪಶ್ಚಾತ್ತಾಪ ಪಟ್ಟಿರಲಿಲ್ಲವೆ? ನೀನು ಹೂಂ ಅನ್ನು ಕೆ.ಎಮ್. – ಈ ಪುರುಕಲ್‌ನ ಇಲ್ಲೇ ಸಿಗಿದು ಸುಧೀಂದ್ರ ನಯ್ಯಾರ್ ಹೆಣದ ಜೊತೆ ಹೂತುಹಾಕಿಬಿಡ್ತೀನಿ. ಇಷ್ಟಕ್ಕೂ ಅಭಯ ಮರ್ಡರ್ ಕೇಸನ್ನು ಪೊಲೀಸ್ ಇಲಾಖೆ ಕೈಗೆತ್ತಿಕೊಳ್ಳುವಂತೆ ಮೊದಲು ಒತ್ತಾಯ ಮಾಡಿದ್ದೇ ನಾನು...' ಎಂದು ಹಲ್ಲು ಕಡಿಯುತ್ತಾ ಮಾತನಾಡಿದ್ದ. ಕಾರ್ತಿಕೇಯನ್ ಮಾಪಿಳ್ಳೈ ಬಹಳವೇ ಕುಡಿದಿರುವುದು ಅವನ ದೇಹ ಮತ್ತು ಮಾತುಗಳಲ್ಲಿ ಪ್ರಕಟವಾಗುತ್ತಿತ್ತು. ಸಿಂಧು ಮೆನನ್ ಕಾರ್ತಿಕೇಯನ್ ಮಾಪಿಳ್ಳೈ ಕಡೆ ಸೀರಿಯಸ್ಸಾಗಿ ನೋಡುತ್ತಾ 'ಕೂಲ್ ಡೌನ್ ಮಾಪಿಳ್ಳೈ. ಪಪ್ಪ ನಮ್ಮ ಮುಂದೆ ಹೆಣವಾಗಿ ಮಲಗಿರುವಾಗ ನೀನು ತಮಾಷೆ ಮಾಡಬೇಕು ಅಂತ ನೋಡ್ತಿದ್ದೀಯ. ಪುರುಕಲ್‌ಗೆ ನೀನೇ ಗುರುವೆಂದೂ, ಅವನು ಈ ಮಟ್ಟಕ್ಕೆ ಬೆಳೆಯಲು ನೀನೇ ಕಾರಣವೆಂದು ಕೊಟ್ಟಾಯಂ ಮತ್ತು

